
ಹೊಡ್ಕೊಂಡು ಕೂರೋರೂ ಇರ್ತಾರಂತೆ. ತಿಂಗಳು ತಿಂಗಳೂ ಬಾಡಿಗೆ ಕಟ್ತಾರಾ, ಕೈ ಕೊಡ್ತಾರಾ, ಹಂಗಿದ್ದ ಯಾವ ತಲೆನೋವೂ ಬೇಡ್ವೇ ಬೇಡ. ಹೇಗೂ ಇಲ್ಲಿಂದ ಹೊರಡೋದು ಪಕ್ಕಾ ಆಗಿದೆ. ಇಲ್ಲಿ ಮನೆ ಇಟ್ಕೊಂಡು ಏನಾಗ್ಬೇಕಿದೆ? ಬರೋ ದುಡ್ಡನ್ನ ಬ್ಯಾಂಕಲ್ಲಿಟ್ಕೊಂಡ್ರೆ ಬಡ್ಡಿ ಒಟ್ಟಾಗ್ತಿರುತ್ತೆ...'

ನಂದಿನಿಗೆ ಮನೆ ಮಾರಲು ಸುತರಾಂ ಮನಸ್ಸಿಲ್ಲ. ಕಹಿ ನೆನಪಿಗೆ ಕಾರಣವಾದ ಮನೆ ಬೇಡ ಎಂದು ಅಮ್ಮನಿಗೆ ಅನ್ನಿಸುತ್ತಿತ್ತೇನೋ. ಹಾಗಿದ್ದರೆ 'ಇಲ್ಲೇ ಇರ್ತೀನಿ' ಎಂದು ವೃಥಾ ಹಟ ಮಾಡಿದ್ಯಾಕೆ? ಏನೋ. ಅಳಿಯ ಮಹಾಶಯ ಈ ವ್ಯವಹಾರಕ್ಕೆ ತಲೆ ಹಾಕಲಿಲ್ಲ. 'ನೀನುಂಟು, ನಿನ್ನ ಅಮ್ಮ ಉಂಟು' ಎಂದು ಜಾರಿಕೊಂಡ. ಕೊನೆಗೂ ಮನೆ ಮಾರಾಟವಾಗಿ, ಅಮ್ಮ ಶಾಶ್ವತವಾಗಿ ಅಲ್ಲಿಗೆ ವಿದಾಯ ಹೇಳಿ, ಮಗಳ ಮನೆ ಸೇರಿಕೊಂಡಿದ್ದಳು. 'ಬಂದ್ಬಿಡು ಅಮ್ಮಾ, ಬಂದ್ಬಿಡು ಅಮ್ಮಾ...' ಎಂದು ಬೆನ್ನು ಹತ್ತಿದ ಬೇತಾಳದಂತೆ ಅವತ್ತು ಅಮ್ಮನನ್ನು ಕಾಡದಿದ್ದರೆ ಇವತ್ತು... ನೆನೆದರೆ ಹೊಟ್ಟೆಯಲ್ಲಿ ಬೆಂಕಿ ಬಿದ್ದಂತಾಗುತ್ತದೆ. ಗಂಡನ ಮೇಲೆ ಉಗ್ರ ಕೋಪ ಬರುತ್ತದೆ. ಗಂಡಸರಂತೆ ಗಂಡಸರು. ಸ್ವಲ್ಪವೂ ವ್ಯವಹಾರಜ್ಞಾನ ಬೇಡವಾ? 'ಅದು ಹಾಗಲ್ಲ, ಹೀಗೆ...' ಎಂದು ಹೇಳಬೇಕಾಗಿದ್ದವನು ಗಂಡ. ತನಗೆ ಪರಧನದ ವ್ಯಾಮೋಹ ಎಳ್ಳಷ್ಟೂ ಇಲ್ಲ ಎನ್ನುವಂತೆ ಎಲ್ಲವನ್ನೂ ಹೆಂಡತಿಯ ಮರ್ಜಿಗೆ ವಹಿಸಿದ. ಅತ್ತ ಅಮ್ಮ ಕೂಡಾ ಕೈ ತೊಳೆದುಕೊಂಡು ಬೆನ್ನು ಹತ್ತಿದ್ದಳು. ಜನ ಆಸ್ತಿ ಮಾಡಲು ನೋಡುತ್ತಾರೆಯೇ ಹೊರತು ಇರುವುದನ್ನು ಕಳೆದುಕೊಳ್ಳಲು ಅವಸರ ಮಾಡುವುದಿಲ್ಲ, ತೀರಾ ತಲೆ ಹೋಗುವಂಥಾ ಸಂದರ್ಭ ಬರದಿದ್ದರೆ. ಪೆದ್ದಿ ನಂದಿನಿ. ತನ್ನ ನಿಲುವಿಗೆ ಗಟ್ಟಿಯಾಗಿ ಅಂಟಿಕೊಳ್ಳಬೇಕಿತ್ತು ಎಂದು ಈಗ ಕೈಕೈ ಹಿಸುಕಿಕೊಂಡರೆ ಪ್ರಯೋಜನವೇನಿದೆ? ಆಗ ಲಕ್ಷಗಟ್ಟಲೆಯಲ್ಲಿ ಮಾರಿದ ಜಾಗಕ್ಕೆ ಈಗ ಕೋಟಿಗಟ್ಟಲೆ ಬೆಲೆ. ದುರದೃಷ್ಟ ಅಂದರೆ ಇವರು ಮನೆ ಮಾರಿದ ಎರಡೇ ವರ್ಷಗಳಲ್ಲಿ ಊರಿನ ದೆಸೆ ತಿರುಗಿತು. ಸಣ್ಣ ಪಟ್ಟಣವಾಗಿದ್ದಿದ್ದು ದೊಡ್ಡ ನಗರವಾಗುವ ಮುನ್ಸೂಚನೆ ತೋರಿಸಿತು. ಜಿಲ್ಲೆಯಿಂದ ಆರಿಸಲ್ಪಟ್ಟ ಪ್ರಭಾವಿ ರಾಜಕಾರಣಿಯೊಬ್ಬರು ಮಂತ್ರಿ ಪದವಿಯನ್ನು ಅಲಂಕರಿಸಿ ಊರಿನ ಉದ್ಧಾರಕ್ಕೆ ಶ್ರೀಕಾರ ಹಾಕಿದರು. ನೋಡನೋಡುತ್ತಿದ್ದಂತೆ ಹೊಸ ಹೊಸ ಕೈಗಾರಿಕೆಗಳು ಊರಿಗೆ ಲಗ್ಗೆ ಇಟ್ಟುವು. ಇರುವ ಸ್ಕೂಲು ಕಾಲೇಜುಗಳ ಜೊತೆ ಹೊಸತು ಆರಂಭವಾದುವು. 'ಬಹುದಿನಗಳ ಬೇಡಿಕೆ' ಎಂದು ಮಂತ್ರಿವರೇಣ್ಯರು ಉರು ಹಾಕುತ್ತಿದ್ದ ವಿಮಾನ ನಿಲ್ದಾಣದ ಕಾಮಗಾರಿ ಆರಂಭವಾಗಿ ಊರಿನ ಜನಸಾಂದ್ರತೆ ಹೆಚ್ಚುತ್ತಾ ಬಂತು.

ಪರಿಣಾಮಸ್ವರೂಪವಾಗಿ ಎಂಬಂತೆ ಭೂಮಿಯ ಬೆಲೆ ಆಕಾಶಕ್ಕೆ ಜಿಗಿಯತೊಡಗಿ, 'ಚದರಡಿಗೆ ಅಷ್ಟಂತೆ, ಇಷ್ಟಂತೆ' ಎನ್ನುವ ಮಾತು 'ಸಿಕ್ಕಷ್ಟಕ್ಕೆ ಸೀದು' ಊರು ಬಿಟ್ಟಿದ್ದ ನಂದಿನಿಯಂಥವರ ಎದೆಗೆ ಚುಚ್ಚುವ ಕುಟುಕುಮುಳ್ಳಾಯ್ತು.

'ಅವಸರ ಮಾಡಿದ್ವಿ ಕಣೇ ಅಮ್ಮಾ. ಇಲ್ದಿದ್ರೆ



ಕೋಟಿಗಳ ಲೆಕ್ಕದಲ್ಲಿ ದುಡ್ಡು ಎಣಿಸ್ಕೋಬಹುದಿತ್ತು' ಎಂದು ನಂದಿನಿ ಹಲವರಿದರೆ ಇದೇ ಅಮ್ಮ ನಿರ್ವಿಕಾರವಾಗಿ ಹೇಳಿದ್ದಳು,

'ಹೀಗಾಗುತ್ತೇಂತ ನಮಗೇನು ಕನಸು ಬಿದ್ದಿತ್ತೇನೇ? ನಮಗೆ ಎಷ್ಟು ಪ್ರಾಪ್ತಿಯೋ ಅಷ್ಟೇ ಲಭ್ಯ. ನಮ್ಮಂತೋರು ಎಷ್ಟು ಜನ ಇದಾರೋ? ಇದನ್ನೇ ತಲೆಗೆ ಹಚ್ಕೊಂಡು ಕೊರಗ್ತಿರ್ಬೇಡ ನೀನು. ಕೊಡೋ ದೇವರು ಕೊಡಬೇಕು ಅನಿಸಿದ್ರೆ ಯಾವತ್ತಿದ್ರೂ ಕೊಡ್ತಾನೆ. ನಿನ್ನ ಮಾವ ಮಾಡಿಟ್ಟಿದ್ದು ಒಂದಕ್ಕೆ ಹತ್ತಾಗ್ಲಿಲ್ವಾ? ಅದನ್ನ ಯಾಕೆ ಹೇಳಲ್ಲ ನೀನು?' ಅಷ್ಟು ಸಮಾಧಾನದಿಂದ, ಶಾಂತಚಿತ್ತದಿಂದ ಉಪದೇಶ ಮಾಡಿದ್ದ ಆ ಅಮ್ಮ ಇವಳೇನಾ? ಜುಜುಬಿ ಐನೂರು ರೂಪಾಯಿಗೆ ಹಲುಬುತ್ತಾ ತನ್ನ ತಲೆ ತಿನ್ನುತ್ತಿರುವವಳು? ನೂರಕ್ಕೂ, ಸಾವಿರಕ್ಕೂ, ಲಕ್ಷ ಕೋಟಿಗಳಿಗೂ ಯಾವ ವ್ಯತ್ಯಾಸ ಗೊತ್ತಾಗುವುದಿಲ್ಲವಾ ಅವಳಿಗೆ? ಮುದಿತನ ಅನ್ನುವುದೇ ಒಂದು ಭ್ರಮಾಧೀನ ಸ್ಥಿತಿ, ಕೆಲವರ ಮಟ್ಟಿಗೆ ಅನಿಸಿತ್ತು ನಂದಿನಿಗೆ. ಏನೇ ಆದರೂ ಅಮ್ಮನನ್ನು ಈ ಗೀಳಿನಿಂದ ಹೊರ ತರದಿದ್ದರೆ ತನ್ನ ತಲೆ ಕೆಟ್ಟು ಹೋಗುತ್ತದೆ ಎನ್ನುವುದು ಅವಳ ದಿಗಿಲು. ದಿನಬೆಳಗಾದರೆ ಅಮ್ಮನದು ಅದೇ ರಾಗ, 'ನಂದೊಂದು ಐನೂರು ರೂಪಾಯಿ ನೋಟು...'

***

'ಏ ಅಮ್ಮಾ, ಏನ್ಮಾಡ್ತಿದ್ದಿ? ಸ್ವಲ್ಪ ಬಾ ಇಲ್ಲಿ...' ನಡುಮನೆಯಲ್ಲಿ ಕುಳಿತು ಧಾರಾವಾಹಿ ನೋಡುತ್ತಿದ್ದ ಅಮ್ಮ ಮಗಳ ಕೂಗಿಗೆ ಧಾವಿಸಿ ಬಂದಿದ್ದಳು. ತನ್ನ ಕೋಣೆಯಲ್ಲಿ ಮಗಳು ಯಾವ ಕಾರುಬಾರು ನಡೆಸಿದ್ದಾಳೆ ಎಂದು ಅಮ್ಮನಿಗೆ ಅಚ್ಚರಿ.

'ಸ್ವಲ್ಪ ಈ ಲೇಪಿನ ತುದಿ ಹಿಡೀತೀಯಾ ಅಮ್ಮ? ನಿನ್ನ ಹಾಸಿಗೇನ ಬಿಸಿಲಿಗೆ ಹಾಕ್ದೆ ಯುಗ ಆಯ್ತು. ಇವತ್ತು ಬಿಸಿಲೂ ಲಾಯ್ಕುಂಟು'.

'ಥೋ, ಇಷ್ಟಕ್ಕೆ ಕರೆದಿದ್ದಾ? ಧಾರಾವಾಹಿ ನೋಡ್ತಿದ್ನಲ್ಲೇ. ನೀನೊಬ್ಳು...'

'ನಿನ್ನ ಧಾರಾವಾಹಿ ಎಲ್ಲಿಗೆ ಓಡ್ಹೋಗುತ್ತೆ? ಮುಂದಿನ ವಾರ ನೋಡಿದ್ರೂ ಅಲ್ಲೇ ಇರುತ್ತೆ...'

ಅಷ್ಟು ಹೊತ್ತಿಗೆ ಜಾಹೀರಾತುಗಳು ಆರಂಭವಾಗಿ ಮಗಳ ಕೆಲಸಕ್ಕೆ ಕೈ ಜೋಡಿಸಲು ಸಜ್ಜಾದಳು ಅಮ್ಮ. ಇಬ್ಬರೂ ಸೇರಿ ಹಾಸಿಗೆಯನ್ನು ಮಂಚದಿಂದ ಕೆಳಗೆಳೆದು, ಅದೋ ಅಲ್ಲೇನದು ಮಂಚದ ನಡುಮಧ್ಯದಲ್ಲಿ?

'ನೋಡೇ ಅಮ್ಮಾ, ನಿನ್ನ ಐನೂರು ರೂಪಾಯಿ ಯಾವ ಮಾಯದಲ್ಲೋ ಇಲ್ಲಿ ಸೇರ್ಕೊಂಡಿದೆಯಲ್ಲೇ...' ಅಷ್ಟರಲ್ಲಾಗಲೇ ಅಮ್ಮ ಗಡಬಡಿಸಿ ಆ ನೋಟನ್ನು ಎತ್ತಿಕೊಂಡು ಕಣ್ಣಿಗೆ ಒತ್ತಿಕೊಂಡಾಗಿತ್ತು. ಕಳೆದುಹೋದ ಅಮೂಲ್ಯವಾದದ್ದೇನೋ ಕೈಗೆಟುಕಿದಂತೆ ಭಾವುಕಳಾಗಿದ್ದಾಳೆ ಅಮ್ಮ. ನಂದಿನಿಗೆ ಸಂತೃಪ್ತಿ.

'ನೋಡಿದ್ಯಾ, ಎಲ್ಲೋ ಇಡೋದು, ಮತ್ತೆಲ್ಲೋ ಹುಡುಕೋದು...'

'...'

'ಯಾರ ಕೈಗೂ ಸಿಗಬಾರ್ದೂಂತ ಆದಷ್ಟು ಲೇಪಿನ ಕೆಳಗೆ ಕೈ ತೂರಿಸಿ ಇಟ್ಟಿದ್ದೀಂತ ಕಾಣುತ್ತೆ...'

'ಬಿಡು, ಸಿಕ್ತಲ್ಲ. ದೇವರು ದೊಡ್ಡೋನು...'

'ಇನ್ನಾದ್ರೂ ಸರಿಯಾಗಿ ತೆಗೆದಿಟ್ಕೋ. ದುಡ್ಡನ್ನ ಎಲ್ಲೆಂದ್ರಲ್ಲಿ ಇಡ್ಬೇಡ'.

ಅಮ್ಮ ಬೀರು ತೆಗೆದು ತನ್ನ ಪರ್ಸಿನಲ್ಲಿ ಆ ನೋಟನ್ನು ಜೋಪಾನವಾಗಿಟ್ಟು, ಅಷ್ಟರಲ್ಲಿ ಮತ್ತೆ ಧಾರಾವಾಹಿ ಆರಂಭವಾಗಿ,

'ಇನ್ನು ನೀನುಂಟು, ನಿನ್ನ ಟೀವಿ ಉಂಟು. ಎಲ್ಲಾ ಮುಗಿದ್ಮೇಲೆ ಹೇಳು. ಆಮೇಲೇ ಹಾಸಿಗೇನ ಬಿಸಿಲಿಗೆ ಹಾಕಿದ್ರಾಯ್ತು...' ನಂದಿನಿ ಹಗುರ ಹೆಜ್ಜೆಗಳಿಂದ ಅಡುಗೆಮನೆಗೆ ನಡೆದಳು. ತುಟಿಗಳಲ್ಲಿ ಕಿರು ನಗೆ. ಮೊದಲೇ ಈ ಉಪಾಯ ಮಾಡಿದ್ದರೆ ಅಮ್ಮನ ಕರ್ಕರೆಯಾದರೂ ತಪ್ಪುತ್ತಿತ್ತು ಅನ್ನುವ ಯೋಚನೆ. ಧಾರಾವಾಹಿ ಮುಗಿಯಿತು.

'ಬಾರೇ, ಹಾಸಿಗೇನ ಬಿಸಿಲಿಗೆ ಹಾಕೋಣ...' ಕರೆಯುತ್ತಿದ್ದಾಳೆ ಅಮ್ಮ. ಆರಂಭ ಮಾಡಿದ ನಾಟಕ ಮುಗಿಸಬೇಕಲ್ಲ? ನಂದಿನಿ ಅಮ್ಮನ ಕರೆಗೆ ಓಗೊಟ್ಟು ಕೋಣೆಗೆ ಬಂದಳು. ಅವಳು ಲೇಪಿಗೆ ಕೈ ಹಚ್ಚುವ ಮುನ್ನವೇ ಅಮ್ಮ ಅವಳ ಹೆಗಲು ಅಲುಗಿಸಿ ಕೇಳಿದಳು,

'ಸತ್ಯ ಹೇಳು, ಆ ನೋಟು ನೀನು ಇಟ್ಟಿದ್ದಾ?'

ಬೆಚ್ಚಿಬೆರಗಾದಳು ನಂದಿನಿ. ಪರವಾಗಿಲ್ಲ, ಅಮ್ಮ ಇಷ್ಟೆಲ್ಲಾ ಸೂಕ್ಷ್ಮ ಗ್ರಹಿಸುವಷ್ಟು ಚುರುಕಾಗಿದ್ದಾಳೆ.

'ಹೇಳೇ, ನೀನೇ ಇಟ್ಟಿದ್ದಾ?'

'ಛೇ, ನಾನ್ಯಾಕೆ ಇಡ್ತೀನಿ. ನೀನೇ ನೋಡಿದೆಯಲ್ಲ, ಲೇಪಿನ ಕೆಳಗೆ...'

'ಇಕಾ, ಸುಳ್ಳಂಪಳ್ಳಿ ಹೇಳ್ಬೇಡ. ನನ್ನ ಮುಖ ನೋಡಿ ಹೇಳು...'

ನಂದಿನಿ ತಲೆಯೆತ್ತಿ ಅಮ್ಮನ ಮುಖ ನೋಡಿದಳು. ಮರುಕ್ಷಣ ಮುಖ ತಪ್ಪಿಸಿದಳು. 'ಮನುಷ್ರನ್ನ ನಂಬಲ್ಲ ನೀನು' ಗೊಣಗಿದಳು.

ಕೊನೆಗೂ ಮನುಷ್ರನ್ನು ನಂಬಲಿಲ್ಲ ನಂದಿನಿಯ ಅಮ್ಮ. 'ಅನ್ಯಾಯವಾಗಿ ನಂದೊಂದು ಐನೂರು ರೂಪಾಯಿ ನೋಟು...' ಎನ್ನುವ ಹಲವರಿಕೆ ಇನ್ನೂ ಚಾಲನೆಯಲ್ಲಿದೆ. ಇದು ಹಿನ್ನೆಲೆಗೆ ಸರಿಯಬೇಕಾದರೆ ಇದನ್ನು ಮೀರಿಸುವ ಮತ್ತೊಂದೇನೋ ಮುನ್ನೆಲೆಗೆ ಬರಬೇಕು. ಅಲ್ಲಿಯವರೆಗೆ...

ಪ್ರತಿಕ್ರಿಯಿಸಿ: **feedback@sudha.co.in**